ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY DEBATES

ಗುರುವಾರ 31ನೇ ಜುಲೈ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 12.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ

ರಾಜ್ಯದಲ್ಲಿ ವಿದ್ಯುತ್ ದರಗಳನ್ನು ಹೆಚ್ಚಿಸಿರುವುದಕ್ಕೆ ವಿರೋಧ ಪಕ್ಷಗಳವರಿಂದ ಧರಣಿ.

(ವಿರೋಧ ಪಕ್ಷದ ಸದಸ್ಯರುಗಳು ಭಾವಿಯಲ್ಲಿ ಕುಳಿತು ವಿದ್ಯುತ್ ದರವನ್ನು ಏರಿಸಿದ ಬಗ್ಗೆ ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು : ಮುಖ್ಯಮಂತ್ರಿಯವರಿಗೆ ಹೇಳಿ ಕಳುಹಿಸಿದ್ದೇನೆ, ಅವರು ಮೂರು ಗಂಟೆಗೆ ಬರುವುದಾಗಿ ಹೇಳಿದ್ದಾರೆ. ಅವರನ್ನು ಮತ್ತು ತಮ್ಮನ್ನು ಕರೆಸಿ ಇನ್ನೊಂದು ಸಲ ಮಾತನಾಡಿ ಸಮಸ್ಯೆ ಬಗೆಹರಿಸೋಣವೆಂಬುದು ನನ್ನ ಆಸೆ. ತಮಗೆ ಆ ವಿಷಯವನ್ನು ತಿಳಿಸುವ ಸಲುವಾಗಿ ಕರೆದಿದ್ದೇನೆ. ಆದ್ದರಿಂದ ನಾವು ಈಗ ಸದನವನ್ನು ಮುಂದೂಡಿ ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಸೇರೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಅಧ್ಯಕ್ಷರೇ, ನಮ್ಮ ನಿಲುವನ್ನು ಸರ್ಕಾರಕ್ಕೆ ಸ್ಪಷ್ಟ ಮಾಡಿದ್ದೇವೆ. ಎರಡೂ ಸದನದ ಸಮಿತಿಯನ್ನು ಮಾಡಬೇಕು. ದರ ಹೆಚ್ಚು ಮಾಡಿರುವ ನೋಟಿಫಿಕೇಷನ್‌ನ್ನು ತಡೆಹಿಡಿಯಬೇಕು. ಈಗಾಗಲೇ ಒಂದು ದಿನ ವ್ಯರ್ಥವಾಗಿದೆ. ಅದನ್ನು ಬಿಟ್ಟರೆ ಮತ್ತೆ ಬೇರೆ ಯಾವ ಮಾತುಕತೆಯೂ ಅಗತ್ಯವಿಲ್ಲ. ನಾವು ಧರಣಿ ಮುಂದುವರೆಸಬೇಕೆಂದು ತೀರ್ಮಾನ ಮಾಡಿದ್ದೇವೆ. ಮೊನ್ನೆ ದಿವಸ ಸದನವನ್ನು ಹದಿನೈದು ನಿಮಿಷ ಮುಂದೂಡಿ, ತಮ್ಮ ಹತ್ತಿರ ಮಾತುಕತೆಯಾಡೋಣವೆಂದು ಅವರಲ್ಲಿ ವಿನಂತಿ ಮಾಡಿಕೊಂಡರೂ ಅವರು ಒಪ್ಪಿಕೊಳ್ಳಲಿಲ್ಲ. ಈಗ ಅವರಿಗೆ ನಾವು ವಿದ್ಯುತ್ ದರವನ್ನು ಹೆಚ್ಚು ಮಾಡಿ ತಪ್ಪು ಮಾಡಿದ್ದೇವೆ, ನಾವು ಹೇಳಲಿ ಬಿಡಲಿ ಬೆಲೆ ಕಡಿಮೆ ಮಾಡುತ್ತೇವೆಂಬುದು ಅವರಿಗೆ ಮನವರಿಕೆಯಾಗಿದೆ. ಆದ್ದರಿಂದ ಅವರು ಇನ್ನೂ ಇದರ ಬಗ್ಗೆ ಪಟ್ಟು ಹಿಡಿಯುವ ಉದ್ದೇಶವಾದರೂ ಏನಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಅಧ್ಯಕ್ಷರೆ, ತಮ್ಮ ಮಾತಿಗೂ ಬೆಲೆ ಕೊಡಲಿಲ್ಲ. ರಾತ್ರಿ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಯವರು ಮತ್ತಾವ ಮಂತ್ರಿಗಳೂ ಬರಲಿಲ್ಲ. ಇವತ್ತು ತಮಗಾದರೂ ಬಂದು ಹೇಳಬೇಕಲ್ಲವೇ?